ಅರಿಕೆಗಳು

ವಿಷಯ :—ಗೋಕಾಕ್ ಸಮಿತಿ ವರದಿ ಬಗ್ಗೆ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ. ನಿಯಮ ೫೦ರ ಕೆಳಗೆ ಜರೂರಾಗಿರತಕ್ಕ, ಸಾರ್ವಜನಿಕ ದೃಷ್ಟಿಯಿಂದ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ನಿನ್ನೆಯ ದಿವಸ ಭದ್ರಾವತಿಯಲ್ಲಿ ಒಂದು ದುರ್ಘಟನೆ ನಡೆದಿದೆ. ಗೋಕಾಕ್ ವರದಿಯನ್ನು ಜಾರಿಗೊಳಿಸಬೇಕೆಂದು ಹೇಳಿ ಅಲ್ಲಿರತಕ್ಕಂತಹ ಸುಮಾರು ೩೦-೪೦ ಸಾವಿರ ಪ್ರದರ್ಶನ ತೆಗೆದುಕೊಂಡು ಹೊರಟರೆ ಅವರ ಮೇಲೆ ಪೋಲೀಸರು ಲಾಠಿ ಪ್ರಯೋಗಿಸಿದ್ದಾರೆ, ಆಶ್ರುವಾಯು ಬಿಟ್ಟಿದ್ದಾರೆ. ಮತ್ತು ಸಿಕ್ಕಾಪಟ್ಟೆ ಹಿಂಸಾಚಾರ ಮಾಡಿದ್ದಲ್ಲದೆ ಹಲವಾರು ಜನರನ್ನು ಅರೆಸ್ಟ್ ಮಾಡಿದ್ದಾರೆ.

ಅಧ್ಯಕ್ಷರು.—ಮಾನ್ಯ ಗಂಗಾಧರನ್ ಅವರೂ ಕೂಡಾ ಈ ವಿಷಯವಾಗಿ ಪ್ರಸ್ತಾಪ ಮಾಡುತ್ತೇನೆಂದು ಪತ್ರ ಕಳುಹಿಸಿದ್ದಾರೆ. ಮಾನ್ಯ ಜೆ ಎಚ್. ಪಟೇಲ್ ಅವರು ನಿಯಮ ೬೩ರ ಕೆಳಗೆ ಕಾಲಿಂಗ್ ಅಟೆಂಷನ್ ಕೊಟ್ಟಿದ್ದಾರೆ. ಈ ಬಗ್ಗೆ ಕಾಲಿಂಗ್ ಅಟೆಂಷನ್‌ಗೆ ಅನುಮತಿ ಕೊಟ್ಟು ವಿಚಾರವನ್ನು ಸರ್ಕಾರಕ್ಕೆ ತಿಳಿಸಿ ವರದಿಯನ್ನು ತರಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ಅಡರ್ನ್‌ಮೆಂಟ್ ಮೋಷನ್‌ಗೆ ನಾನು ಅನುಮತಿ ಕೊಟ್ಟಿಲ್ಲ. ತಾವು ಏನು ಪ್ರಸ್ತಾಪ ಮಾಡಬೇಕೋ ಅದನ್ನು ಕಾಲಿಂಗ್ ಅಟೆಂಷನ್ ಮೂಲಕ ಪ್ರಸ್ತಾಪ ಮಾಡಬಹುದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಸಂದರ್ಭದಲ್ಲಿ ನಾನೂ ಕೂಡಾ ಕಾಲಿಂಗ್ ಅಟೆಂಷನ್‌ಗೆ ನೋಟೀಸ್ ಕೊಟ್ಟಿದ್ದೇನೆಂದು ಹೇಳುವುದಕ್ಕೆ ಬಯಸುತ್ತೇನೆ. ಆದರೆ ಒಂದು ವಿಚಾರವನ್ನು ಇಲ್ಲಿ ಹೇಳುತ್ತೇನೆ. ಈಗ ಭದ್ರಾವತಿಯಲ್ಲಿ ಘಟನೆಯಲ್ಲಿ ಏನಾಗಿದೆ ಎಂದರೆ, ಈ ಒಂದು ಗೋಕಾಕ್ ವರದಿಯ ಬಗ್ಗೆ ಏನು ಗೊಂದಲವಾಗಿದೆಯೆಂದರೆ, ಈ ವರದಿಯ ಪರ ಹಾಗೂ ವಿರುದ್ಧವಾಗಿ ಮೆರವಣಿಗೆಯಾಗಿ ಅದು ಘರ್ಷಣೆಗೆ ಅವಕಾಶ ಆಗಿದೆ. ನಾವು ಈ ಒಂದೊಂದು ಘಟನೆಗಳ ಬಗ್ಗೆ ಏನು ತೆಗೆದುಕೊಳ್ಳುತ್ತೇವೆಯೋ ಅದಕ್ಕಿಂತ ಮೂಲಭೂತವಾಗಿ ಏನೊಂದು ಅಭಿಪ್ರಾಯ ಪರ ಹಾಗೂ ವಿರೋಧವಾಗಿದೆ ಅದು ಘರ್ಷಣೆಯ ಮಟ್ಟಕ್ಕೆ ಹೋಗುತ್ತಿದೆ. ಇದನ್ನು ತ್ವರಿತವಾಗಿ ಸರಿಪಡಿಸಬೇಕಾಗಿದೆ. ಇದರ ಬಗ್ಗೆ ತಕ್ಷಣವೇ ಚರ್ಚೆ ಮಾಡಿ ತಾವು ಒಂದು ಸ್ಪಷ್ಟ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಗೋಕಾಕ್ ವರದಿಯ ಪ್ರತಿಗಳು ಕನ್ನಡದಲ್ಲಿಷ್ಟಿದ್ದು, ಅವು ಇಂಗ್ಲೀಷ್‌ಗೆ ತರ್ಜುಮೆಯಾಗಬೇಕಾಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ವಿಷಯದ ಬಗ್ಗೆ ಮಾತನಾಡುವಾಗ ಕನ್ನಡದ ಪರ ಹಾಗೂ ಕನ್ನಡದ ವಿರುದ್ಧ ಎನ್ನತಕ್ಕ ವ್ಯತ್ಯಸ್ತವಾದ ಅಭಿಪ್ರಾಯವಿದೆ. ಇದರ ಬಗ್ಗೆ ಮಾತನಾಡಿದರೂ ತಪ್ಪು ಬಿಟ್ಟರೂ ತಪ್ಪು ಎನ್ನುವ ಪರಿಸ್ಥಿತಿ ಇದೆ. ತವಗೆ ಹೇಳಬೇಕೆಂದರೆ, ವಿಶ್ವವಿದ್ಯಾನಿಲಯದಲ್ಲಿ ಒಂದು ಉನ್ನತ ಪದವಿಯಲ್ಲಿ ಇರತಕ್ಕವರು ನನಗೆ ದೂರವಾಣಿ ಮಾಡಿ ಅಸೆಂಬ್ಲಿಯಲ್ಲಿ ಇದೇನು ಹೀಗೆ ಮಾತನಾಡಿಬಿಟ್ಟಿರಿ ಎಂದು ಕೇಳಿದರು. ಅವರು ಏನು ತಿಳಿದುಕೊಂಡರೋ, ಇದು ಕನ್ನಡ ವಿರೋಧೀ ಪ್ರಶ್ನೆ ಅಲ್ಲ, ಆದರೆ ಮೈನಾರಿಟೀಸ್ ಯಾರು ಇದ್ದಾರೆ ಅವರಿಗೆ ಏನಾಗಿದೆ ಎಂಬುದನ್ನು ಪರಿಶೀಲನೆ ಮಾಡಬೇಕು, ಹೌದೇ ಅಲ್ಲವೇ ಎಂಬುದನ್ನು ಬಹಳ ಬೇಗನೆ ತೀರ್ಮಾನ ಮಾಡದೇ ಹೋದರೆ ..

ಅಧ್ಯಕ್ಷರು.—ಈ ವಿಷಯದ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಿರುವವರೆಲ್ಲರೂ, ಮಾನ್ಯ ಕುಮಾರಿ ಇಸ್ಸಾಮ್ ಅವರೂ ಕೂಡಾ ಕನ್ನಡದ ಬಗ್ಗೆ ವಿರೋಧ ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಲ್ಲಿ ಆಗಿರತಕ್ಕ ಗೊಂದಲ ಏನೆಂದರೆ, ಪರ ಹಾಗೂ ವಿರೋಧ ಎನ್ನುವ ವಿವಾದ ಇದೆ. ಇದರ ಬಗ್ಗೆ ತ್ವರಿತವಾಗಿ ಗಮನ ಕೊಡಬೇಕು.

ಶ್ರೀ ಬಿ. ವಿ ಕಕ್ಕಿಲಾಯ.—ಇಂಗ್ಲೀಷ್ ಪ್ರತಿಗಳು ಬರುವುದಕ್ಕೆ ಮುಂಚೆ ಕನ್ನಡದ ಗೋಕಾಕ್ ವರದಿಯನ್ನು ಕೊಡಿ.

ಅಧ್ಯಕ್ಷರು.—ಕನ್ನಡದ ವರದಿಯ ಪ್ರತಿಗಳನ್ನು ಕೊಡಲಾಗಿದೆ.

ಶ್ರೀ ಅಜೀಜ್ ಸೇಟ್.—ಎಲ್ಲಿ ಸ್ವಾಮಿ ನಮಗೆ ಕಾಪಿಗಳು ಬಂದಿಲ್ಲ.

ಅಧ್ಯಕ್ಷರು.—ಯಾರಿಗೆ ಪ್ರತಿಗಳು ಬಂದಿಲ್ಲ ಅವರಿಗೆ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ನಮಗೆಲ್ಲಿ ಯಾರಿಗೂ ಆ ಪ್ರತಿಗಳು ಬಂದಿಲ್ಲ.

ಅಧ್ಯಕ್ಷರು.—ಸದಸ್ಯರುಗಳಿಗೆ ಪ್ರತಿಗಳನ್ನು ಕೊಟ್ಟಿರುವ ಬಗ್ಗೆ ಕಛೇರಿಯಲ್ಲಿ ದಾಖಲೆ ಇದೆ.

ಶ್ರೀ ಅಜೀಜ್ ಸೇಟ್.—ಅವರು ಇಶ್ಯೂ ಮಾಡೇ ಇಲ್ಲ ಅದು ಹೇಗೆ ಸಾಧ್ಯ ?

ಅಧ್ಯಕ್ಷರು.—ತಮಗೆ ಪ್ರತಿ ಬರದಿದ್ದರೆ ಇನ್ನೊಂದು ಪ್ರತಿಯನ್ನು ಕೊಡಿಸುವ ವ್ಯವಸ್ಥೆ ಮಾಡೋಣ. ಅದು ಬಿಟ್ಟು ಕಛೇರಿಯ ಕಾರ್ಯದ ಬಗ್ಗೆ ಹೇಳುವುದು ಸರಿಯಲ್ಲ. ೧೪-೭-೧೯೬೧ರಲ್ಲಿ ಪ್ರತಿಗಳನ್ನು ಕಳುಹಿಸಿಕೊಡಲಾಗಿದೆ.

ಶ್ರೀ ಅಜೀಜ್ ಸೇಟ್.—ಇದು ದೂರಕ್ಕೆ ಸತ್ಯ. (ನಗು)

ಶ್ರೀ ಮೈಬೇಲ್ ಬಿ. ಫರ್ನಾಂಡಿಸ್. —ಸ್ವಾಮಿ, ಅವರು ಊರ್ದೂನಲ್ಲಿ ಹೇಳುತ್ತಿದ್ದಾರೆ.

ಶ್ರೀ ಜೆ. ಹೆಚ್. ಪಟೀಲ್.—ಇಲ್ಲಿ ಪರದಿ ಬಗ್ಗೆ ಚರ್ಚೆ ಮಾಡಲು ಪರ ವಿರೋಧ, ಇಂಗ್ಲೀಷ್ ಕನ್ನಡ ಎನ್ನುವ ಪ್ರಶ್ನೆ ಅಲ್ಲ ಹೊರಗಡೆ ನಡೆಯತಕ್ಕ ಪ್ರದರ್ಶನದಲ್ಲಿ ಏನು ಹಿಂಸೆ ನಡೆಯುತ್ತಿದೆ ಅದು ಗೋಕಾಕ್ ವರದಿಗೆ ಸಂಬಂಧಪಟ್ಟುದಲ್ಲ, ಬರೀ ಗೋಕಾಕ್ ವರದಿಗೆ ಸಂಬಂಧಪಟ್ಟ ಕನ್ನಡಕ್ಕೆ ಸಂಬಂಧಿಸಿದ ಪ್ರಶ್ನೆ ಅಲ್ಲ. ಇದಕ್ಕೆ ಬೇರೆಬೇರೆ ಕಾರಣಗಳು ಇವೆ. ದೃಷ್ಟ ಶಕ್ತಿಗಳು ನಡೆಯುತ್ತಿವೆ. ಇದನ್ನು ಸರ್ಕಾರ ಹತೋಟಿಯಲ್ಲಿ ಇಡಲಿ. ಭಾಷೆ ಬಗ್ಗೆ ಹೇಳುವುದಾದರೆ, ಉರ್ದು ಏನೂ ಮಹಮದೀಯರ ಗುತ್ತಿಗೆ ಅಲ್ಲ. ಕನ್ನಡ ಏನೂ ಹಿಂದೂಗಳ ಗುತ್ತಿಲ್ಲ ಅಲ್ಲ. ಗುಲ್ಬರ್ಗ ಪ್ರದೇಶದಲ್ಲಿ ಇರತಕ್ಕ ಎಷ್ಟೋ ಜನ ಉರ್ದುವನ್ನು ಚಾಸ್ತಿ ಮಾತನಾಡುತ್ತಾರೆ. ಹಾಗೆಯೇ ನಮ್ಮ ಜಿಲ್ಲೆಯ ಹಳ್ಳಿಗಾಡಿನಲ್ಲಿರತಕ್ಕ ಎಷ್ಟೋ ಜನ ಮುಸ್ಲಿಮರಿಗೆ ಉರ್ದುವೇ ಗೊತ್ತಿಲ್ಲ. ಹಿಂದೂ ಮುಸಲ್ಮಾನ್ ಎಂದು ಮಾಡಿದ್ದಾರೆ. ಈ ಬಗ್ಗೆ ಅಹಿತಕರ ಘಟನೆಗಳು ನಡೆಯದ ಹಾಗೆ ಹತೋಟಿಯನ್ನು ಇಟ್ಟು ಕೊಳ್ಳಲಿ. ಆ ನಂತರ ಬೇಗ ಚರ್ಚೆ ಮಾಡೋಣ.

ಶ್ರೀ ಸಿ. ಎಂ. ಇಬ್ರಾಹಿಂ.—ಅಧ್ಯಕ್ಷರೆ. ಈ ಮೂಲಕ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ವಿಷಯದಲ್ಲಿ ಸದನದ ಸದಸ್ಯರೆಲ್ಲರೂ ಗಂಭೀರವಾಗಿ ತಿಳಿದುಕೊಂಡಿದ್ದಾರೆ. ಹೊರಗೆ ಪರ ಹಾಗೂ ವಿರೋಧ ಏನು ಇದೆ ಅದನ್ನು ಕೂಡಲೇ ನಿಲ್ಲಿಸಿ ಎನ್ನುವುದು ಇಲ್ಲಿರತಕ್ಕ ಪ್ರತಿಯೊಬ್ಬರ ಕಳಕಳಿ ಇದೆ. ಆದುದರಿಂದ ಇನ್ನು ಮುಂದಾದರೂ ಅಲ್ಲಿ ಪ್ರದರ್ಶನಕ್ಕೆ ಅವಕಾಶವನ್ನು ಕೊಡಬೇಡಿ ಎಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ನಾಳೆ ಈ ವಿಷಯ ಸಭೆಯಲ್ಲಿ ಬರುತ್ತದೆ, ಆಗ ನಾನು ಚರ್ಚೆ ಮಾಡುತ್ತೇನೆ. ಅಲ್ಲಿ ಪ್ರದರ್ಶನದಲ್ಲಿ ೩೦-೪೦ ಸಾವಿರ ಜನ ಸೇರಿರಲಿಲ್ಲ. ಎರಡು ಎರಡೂವರೆ ಸಾವಿರ ಜನ ಸೇರಿದ್ದಿರಬಹುದು. ಅಷ್ಟು ಜನ ಎಂದು ಯಾರು ವರದಿ ಕೊಟ್ಟರೋ ಗೊತ್ತಾಗಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್:—ಈಗಾಗಲೇ ಅಲ್ಲಿ ಗೊಂದಲ ಆಗಿದೆ, ಅಲ್ಲಿ ನಮ್ಮ ಮಾತಿನಿಂದ ತುಪ್ಪ ಸುರಿಯುವುದು ಬೇಡ.

ಶ್ರೀ ಸಿ. ಎಂ. ಇಬ್ರಾಹಿಂ.—ಆ ಊರಿನಲ್ಲಿ ಏನು ಆಗಿದೆ ಹಾಗೂ ಏನು ಆಗಿಲ್ಲ ಎಂಬುದು ನನಗೆ ಗೊತ್ತು. ನಾಳೆಯೇ ಅಲ್ಲಿ ಬೇಕಾದರೆ ಎಲೆಕ್ಷನ್ ನಡೆಯಲಿ ಗೊತ್ತಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಇದಕ್ಕೂ ಎಲೆಕ್ಷನ್‌ಗೂ ಏನು ಸಂಬಂಧ ಸ್ವಾಮಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಇಲ್ಲಿ ಚರ್ಚೆ ಆಗಬೇಕೆಂದು ಹೇಳಿದ್ದೀರಿ. ಈ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಗೋಕಾಕ್ ವರದಿ ಬಂದಮೇಲೆ ಪರ ಹಾಗೂ ವಿರೋಧದ ಪೆರವಣಿಗೆಗಳು ಆಗುತ್ತಿವೆ. ಈ ಒಂದು ವರದಿಯ ಬಗ್ಗೆ ಸರ್ಕಾರದ ನಿರ್ಣಯ ಏನು ಎಂಬುದು ಇನ್ನೂ ಗೊತ್ತಾಗಿಲ್ಲ. ಕನ್ನಡವನ್ನು ಒಪ್ಪಿಕೊಂಡರೆ ಉರ್ದು ಶಾಲೆಗಳ ಹಾಗೂ ಉರ್ದು ಶಾಲಾ ಉಪಾಧ್ಯಾಯರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಹೇಳಿಲ್ಲ. ಈ ವರದಿಯನ್ನು ಒಪ್ಪಿಕೊಂಡಿದೆ ಅಷ್ಟೆ.

ಮಾನ್ಯ ಮುಖ್ಯಮಂತ್ರಿಗಳು ವಿರೋಧಪಕ್ಷದ ನಾಯಕರುಗಳನ್ನು ಇದಕ್ಕೆ ಸಂಬಂಧಪಟ್ಟವರನ್ನು ಬೆಳಗೆ ಕರೆದು ಗೋಕಾಕ್ ವರದಿಯ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕು. ಅದನ್ನು ಬಿಟ್ಟು ಈ ಸಭೆಯಲ್ಲಿ ಚರ್ಚೆ ಮಾಡುವುದರಿಂದ ಸಾರ್ವಜನಿಕರ ಮೇಲೆ ಪರಿಣಾಮ ಬೀರುತ್ತೆ. ಈ ರಾಜ್ಯದಲ್ಲಿ ಕನ್ನಡಕ್ಕೆ ಗೌರವ ಉಳಿಯಲೇ ಬೇಕು. ಅಲ್ಪಸಂಖ್ಯಾತರ ಭಾಷೆಗಳಿಗೆ ಸಂವಿಧಾನದಲ್ಲಿ ಕೊಟ್ಟಂತೆ ರಕ್ಷಣೆಯನ್ನು ಕೊಡಲೇಬೇಕು ಈ ಎರಡೂ ವಿಷಯಗಳನ್ನು ಕಾಯ್ದುಕೊಂಡು ಹೋಗುವಂತ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕಾದರೆ, ಮಾನ್ಯ ಮುಖ್ಯಮಂತ್ರಿಗಳು

ಆದಷ್ಟು ಬೇಗ ಬಂದು ''ಗುಪ್ತ ಸಭೆಯನ್ನು'' ಕರೆದು, ಅಲ್ಲಿ ಚರ್ಚೆ ಮಾಡಿ, ಸೂಕ್ತವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದರಿಂದ ಜನಗಳಿಗೆ ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ಸಲಹೆಯನ್ನು ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೊಮ್ಮಾಯಿಯವರು ಮಾಡಿದಂತೆ ಸಲಹೆ ಸೂಕ್ತವಾಗಿದೆ. ಆಲ್ಲಿ ಯಾರ ವಿರುದ್ಧವೂ ಇಲ್ಲ. ಸುಮ್ಮನೆ ಇಲ್ಲದ್ದನ್ನು ಕಲ್ಪನೆ ಮಾಡಿಕೊಂಡು ವಿನಾಕರಣ ಗಲಾಟೆಗಳು ನಡೆಯುತ್ತವೆ. ಇದರಿಂದ ಎಲ್ಲರ ಮನಸ್ಸಿಗೆ ನೋವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಗುಪ್ತ ಸಭೆಯನ್ನು ಕರೆದು ಚರ್ಚೆ ಮಾಡುವುದಾದರೆ, ನಾವು ಸಂಪೂರ್ಣವಾದ ಸಹಕಾರವನ್ನು ನೀಡುತ್ತೇವೆ.

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಈಗ ನಡೆಯುತ್ತಿರುವ ಗಲಾಟೆ, ಗೊಂದಲಗಳನ್ನು ನೋಡಿದರೆ. ಭಾಷಾವಾರು ಗಲಭೆಗಳ ಮಾದರಿ ಕಂಡುಬರುತ್ತದೆ. ಐ.ಟಿ.ಐ ಕಾರ್ಖಾನೆಯಲ್ಲಿ ''ತಮಿಳು ಮಂಡ್ರಂ'' ಎಂದು ಇದೆ. ೩೦-೪೦ ಜನ ಕನ್ನಡ ಹುಡುಗರು ಹೋಗಿ, ಅಲ್ಲಿ ಗಲಾಟೆ ಮಾಡಿರುತ್ತಾರೆ. ಇದರಿಂದ ಕಾರ್ಖಾನೆಯ ಉತ್ಪಾದನೆಗೂ ಕೂಡ ದಕ್ಕೆ ಬರುತ್ತದೆ. ಮಾನ್ಯ ಬೊಮ್ಮಾಯಿಯವರು ಹೇಳಿದಂತೆ ಮಾನ್ಯ ಮುಖ್ಯಮಂತ್ರಿಯವರು ಕೂಡಲೇ ಎಲ್ಲ ರಾಜಕೀಯ ಮುಖಂಡರುಗಳ ಮಂತ್ರಿ ಉನ್ನತ ವ್ಯಕ್ತಿಗಳ ಸಭೆ ಕರೆದು, ಶಾಂತರೀತಿಯ ವಾತಾವರಣವನ್ನು ಉಂಟು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

SRI QAMARUL ISLAM.—Sir I will also support the views expressed by Sri Bommai regarding this issue. The tension created should go. It would be better if the Hon'ble Chief Minister calls a meeting before it is discussed in the House. I endorse the views of hon'ble Member Sri Bommai.

ಶ್ರೀ ಅಜೀಜ್ ಸೇಟ್.—ಈ ವಿಚಾರವನ್ನು ಉಪಯೋಗಿಸಿಕೊಂಡು ಕೆಲವರು ಲೀಡರ್‌ಷಿಪ್ ಗೇಯಿನ್ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ತೊಂದರೆಗೆ ಒಳಗಾಗುವವರು ಜನಗಳು. ತಮಿಳು ಸಂಘದ ಮೇಲೆ ಗಲಾಟೆ ಮಾಡಲೀ, ಯಾರ ಮೇಲೆ ಗಲಾಟೆ ಮಾಡಿದರೂ ತಪ್ಪಾಗುತ್ತದೆ. ಕನ್ನಡದ ವಿರುದ್ಧವಾಗಿ ಮಾತನಾಡುವುದು ತಪ್ಪಾಗುತ್ತದೆ. ರಾಜ್ಯಾಂಗದ ಪ್ರಕಾರ ಅಲ್ಪಸಂಖ್ಯಾತ ಭಾಷೆಗಳಿಗೆ ರಕ್ಷಣೆಯನ್ನು ಸರ್ಕಾರ ಕೊಡಬೇಕಾಗುತ್ತದೆ. ಅಪ್ಪೆಲ್ಲಾ ಆದರೂ ಸರ್ಕಾರ ಸುಮ್ಮನೆ ಏತಕ್ಕೆ ಕೂತಿದೆಯೋ ಗೊತ್ತಿಲ್ಲ.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರು ಕೊಟ್ಟಂತ ಸಲಹೆಯನ್ನು ಖಂಡಿತವಾಗಿ ನಾನು ಒಪ್ಪುತ್ತೇನೆ. ೧೫ನೇ ತಾರೀಖು ಬೆಳಿಗ್ಗೆ ಎಲ್ಲ ರಾಜಕೀಯ ಪಕ್ಷಗಳ ಮುಖಂಡರನ್ನೂ ಮತ್ತಿತರ ಸದಸ್ಯರನ್ನು ಕರೆಸಿ, ಗುಪ್ತ ಸಭೆ ನಡೆಸಿ, ವಿಚಾರ ವಿನಿಮಯ ಮಾಡಿ, ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಈ ಸದನದಲ್ಲಿ ಆದ ತೀರ್ಮಾನವನ್ನು ಸರ್ಕಾರ ಒಪ್ಪಲೇಬೇಕಾಗುತ್ತದೆ. ನಾನು ಸಾರ್ವಜನಿಕರಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ವಿಷಯವನ್ನು ಚುನಾಯಿತ ಪ್ರತಿನಿಧಿಗಳಿಗೆ ಬಿಟ್ಟು, ಅಂತಿಮವಾಗಿ ತೀರ್ಮಾನವಾಗುವವರೆಗೆ ಯಾವುದೇ ರೀತಿಯ ಹಿಂಸಾ ಕಾರ್ಯಗಳಲ್ಲಿ, ಪ್ರತಿಭಟನೆಗಳಲ್ಲಿ ಯಾವ ವರ್ಗದ ಜನರೂ ಕೈಗೊಳ್ಳಬಾರದೆಂದು ತಮ್ಮ ಮೂಲಕ ಜನತೆಯಲ್ಲಿ ಕೇಳಿಕೊಳ್ಳುತ್ತೇನೆ.

CALLING ATTENTION TO A MATTER OF URGENT PUBLIC IMPORTANCE.

Re: Suicide of a Class IV Employees of the Survey Department at Chickmagalur.

SRI B.V. KAKKILAYA (Vittal).—Sir, I call the attention of the hon. Chief Minister to the suicide committed by a Class IV employee